ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

www.anekal.tpa.gov.in, www.e-vinyasa.kar.nic.in

## ಪ್ರಾರಂಭಿಕ ಪ್ರಮಾಣ ಪತ್ರ

ಸಂಖ್ಯೆ:ಆಯೋಪ್ರಾ/ಸಿಸಿ/278/2020-21 ದಿನಾಂಕ: 18 FEB 2021

ಶ್ರೀ ಶಿವಲಿಂಗಪ್ಪ, ಶ್ರೀ ರಾಮಚಂದ್ರಪ್ಪ ಮತ್ತು ಶ್ರೀಮತಿ ಗೌರಮ್ಮ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಶ್ರೀ ಬಿ.ಟಿ.ನಾಗರಾಜರೆಡ್ಡಿ, ಮ್ಯಾನೇಜಿಂಗ್ ಡೈರಕ್ಟರ್, ಮೆ॥ ಮಹೇಂದ್ರ ಹೋಮ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಅಂದಾಪುರ ಗ್ರಾಮದ ಸ.ನಂ.6/1, 8/4, 9/2, 10/1, 12/1 ಮತ್ತು 13 ಗಳಲ್ಲಿನ ಒಟ್ಟು 09ಎಕರೆ 17ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆಯಾಗಿರುವ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ (Group Housing) ನಕ್ಷೆಯಲ್ಲಿನ ಖಾತಾ ನಂ.1829/6/1, 8/4, 9/2, 10/1, 12/1, 13ರ 34322.27ಚ.ಮೀ. ವಿಸ್ತೀರ್ಣದ ನಿವೇಶನದಲ್ಲಿ **ಟವರ್-ಎ ರಲ್ಲಿ 2-ಬೆಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು, ಟವರ್-ಬಿ ರ ಬ್ಲಾಕ್-ಎ, ಬಿ ರಲ್ಲಿ 2-ಬೆಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು, ಟವರ್-ಬಿ ರ ಬ್ಲಾಕ್-ಸಿ ರಲ್ಲಿ ಬೆಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು, ಟವರ್-ಸಿ ರ ಬ್ಲಾಕ್-ಎ, ಬಿ ರಲ್ಲಿ ಬೆಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು ಮತ್ತು ಟವರ್-ಡಿ ರಲ್ಲಿ Indoor Games ಒಟ್ಟು** 118337.790**ಚ.ಮೀ. ವಿಸ್ತೀರ್ಣದಲ್ಲಿ 662 ವಸತಿ ಘಟಕಗಳ** ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ. ಈ ಸಂಬಂಧ ಉತ್ತಮತೆ ಶುಲ್ಕ ರೂ.23,93,700/-ಗಳ ರಶೀದಿ ನಂ.4111759, ಭದ್ರತಾ ಠೇವಣಿ ಶುಲ್ಕ ರೂ.59,16,900/-ಗಳ ರಶೀದಿ ನಂ.4111760, ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳುವ ಉದ್ದೇಶಕ್ಕೆ ಸೆಸ್ ರೂ.8,10,500/ , ರಶೀದಿ ನಂ.4111375, ರಿಂಗ್ ರೋಡ್ ರಚನೆಯ ಉದ್ದೇಶಕ್ಕಾಗಿ ಹೆಚ್ಚುವರಿ ಶುಲ್ಕ ರೂ.8,10,500/-ಗಳ ರಶೀದಿ ನಂ.4111473, ಕೊಳಗೇರಿಗಳನ್ನು ಸುಧಾರಿಸುವ ಉದ್ದೇಶಕ್ಕೆ ಸೆಸ್ ರೂ.4,05,300/- ರಶೀದಿ ನಂ.4111578, ಮತ್ತು ಸಾಮೂಹಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶಕ್ಕೆ ಸೆಸ್ ರೂ.20,26,300/- ರಶೀದಿ ನಂ.4111676, ದಿನಾಂಕ:06-01-2021ರಂದು ಪಾವತಿಸಲಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1)ರನ್ವಯ ಈ ಕೆಳಕಂಡ ಷರತ್ತುಗೊಳಪಡಿಸಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡಿದೆ.

## ಷರತ್ತುಗಳು

1) ಮೇಲ್ಕಂಡ ಪ್ರದೇಶದಲ್ಲಿ ನಿರ್ಮಿಸುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ **ವಸತಿ ಸಮುಚ್ಛಯ** ಉಪಯೋಗಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ಕಟ್ಟಡ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1)ರಡಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ.
3) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ ಹಾಗೂ ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಬೇಕಾದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಪರವಾನಿಗೆ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.
4) ಕಟ್ಟಡ ನಿರ್ಮಾಣಕ್ಕೆ ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡದ, ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.
5) ಈ ಪ್ರಾರಂಭಿಕ ಪ್ರಮಾಣ ಪತ್ರವು **ಮಂಜೂರಾದ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ**. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.
6) ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.

ಪು.ತಿ.ನೋ...

7) ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
8) ವಿನ್ಯಾಸದಾರರು ಕಟ್ಟಡ ನಿರ್ಮಾಣದ ಸುತ್ತ ತಡೆಗೋಡೆ ನಿರ್ಮಿಸಿ ಧೂಳು, ಕಟ್ಟಡ ಸಾಮಾಗ್ರಿಗಳಿಂದ ಅಕ್ಕಪಕ್ಕದ ಜನರಿಗೆ ಮತ್ತು ಕಟ್ಟಡಗಳಿಗೆ ತೊಂದರೆಯಾಗದಂತೆ ನಿರ್ವಹಿಸತಕ್ಕದ್ದು.
9) ತಾತ್ಕಾಲಿಕ ಶೌಚಾಲಯಗಳನ್ನು ಕಾರ್ಮಿಕರ ಅನುಕೂಲಕ್ಕಾಗಿ ನಿರ್ಮಿಸಿ ನಂತರ ನಿರ್ಮೂಲಗೊಳಿಸತಕ್ಕದ್ದು.
10) ವಾಹನ ಚಾಲಕರು, ಕಾವಲುಗಾರರು ಮತ್ತು ಸಂದರ್ಶಕರಿಗಾಗಿ ಒಂದು ಶೌಚಾಲಯವನ್ನು ನಿರ್ಮಿಸತಕ್ಕದ್ದು.
11) ಒಣಕಸ/ಹಸಿಕಸವನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ಗೊಬ್ಬರವಾಗಿ ಮಾರ್ಪಡಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.
12) ವಾಹನ ನಿಲುಗಡೆ ಪ್ರದೇಶವನ್ನು ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.
13) ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ರಸ್ತೆಯಲ್ಲಿ/ಚರಂಡಿ ಮೇಲೆ ಅಥವಾ ಯಾವುದೇ ಸಾರ್ವಜನಿಕ ಪ್ರದೇಶದಲ್ಲಿ ಶೇಖರಣೆ ಮಾಡಬಾರದು, ಈ ಬಗ್ಗೆ ಕಂಡುಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.
14) ಪ್ರಸ್ತಾವಿತ ಪ್ರದೇಶದ ಸುತ್ತಲೂ ಬರುವ ನಡುಜಾಗಗಳಲ್ಲಿ ಕಡ್ಡಾಯವಾಗಿ ಮರಗಳನ್ನು ಬೆಳೆಸತಕ್ಕದ್ದು.
15) ನಿವೇಶನದ ಆವರಣದೊಳಗೆ ಮಳೆ ನೀರಿನ ಕೊಯ್ಲುನ್ನು ಅಳವಡಿಸಿ ಸೂಕ್ತವಾಗಿ ನಿರ್ವಹಿಸತಕ್ಕದ್ದು.
16) ಸೋಲಾರ್ ವಾಟರ್ ಹಿಟರ್ / ಸೋಲಾರ್ ಲೈಟ್‌ಗಳನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
17) ಪ್ರಸ್ತಾವಿತ ನಿವೇಶನವು ಯಾವುದೇ ಭೂಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
18) ಪ್ರಸ್ತಾವಿತ ಪ್ರದೇಶದಲ್ಲಿ ವಿಕಲಚೇತನರಿಗೆ ಅನುಕೂಲವಾಗುವಂತೆ ಕಟ್ಟಡದ ಸುತ್ತಲೂ ಪಾದಚಾರಿ ಮಾರ್ಗದಲ್ಲಿ ಮತ್ತು Lift ಹಾಗೂ Ramp ನಲ್ಲಿ ಎರಡು ಚಕ್ರಗಳ ಖುರ್ಚಿ ಸರಾಗವಾಗಿ ಹೋಗಿ ಬರುವಂತೆ ಕಡ್ಡಾಯವಾಗಿ ನಿರ್ಮಿಸತಕ್ಕದ್ದು.
19) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.
20) ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪತ್ರ ಸಂಖ್ಯೆ:CTE-323703 PCB ID 100064 ದಿನಾಂಕ:09-02-2021ರಲ್ಲಿ ವಿಧಿಸಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗತಕ್ಕದ್ದು ಮತ್ತು ನಿಬಂಧನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.
21) ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸುವ ಮುನ್ನ **ಚಂದಾಪುರ ಪುರಸಭೆಯಿಂದ** ಕಟ್ಟಡ ಪರವಾನಿಗೆಯನ್ನು ಪಡೆಯತಕ್ಕದ್ದು.
22) ಯಾವುದೇ ಸಿವಿಲ್ ವ್ಯಾಜ್ಯಗಳಿದ್ದಲ್ಲಿ, ನ್ಯಾಯಾಲಯದ ಆದೇಶಕ್ಕೆ ಬದ್ಧರಾಗಿರುವ, ಸುಳ್ಳು ಮಾಹಿತಿ ಅಥವಾ ಸಲ್ಲಿಸಿರುವ ಯಾವುದೇ ಮಾಹಿತಿ / ದಾಖಲೆಗಳು, ತಪ್ಪಾಗಿದ್ದಲ್ಲಿ / ಫೋರ್ಜರಿ ಆಗಿದ್ದಲ್ಲಿ / ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಕಟ್ಟಡ ನಕ್ಷೆ ಅನುಮೋದನೆಯು ಸ್ವಯಂಚಾಲಿತವಾಗಿ ರದ್ದಾಗುವ ನಿಬಂಧನೆಗೊಳ್ಳಪಟ್ಟಿರುತ್ತದೆ.
23) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಯಾವ ಪೂರ್ವ ಸೂಚನೆಯೂ ಇಲ್ಲದೇ ತಂತಾನೆ ರದ್ದಾಗುತ್ತದೆ.
24) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಿಂದ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳತಕ್ಕದ್ದು.
25) ಸಂಬಂಧಪಟ್ಟ (Fire, Bescom, BSNL, KSPCB, SEIAA, Airport Authority) ಇಲಾಖೆಗಳಿಂದ ಪಡೆದ ನಿರಾಕ್ಷೇಪಣಾ ಪತ್ರಗಳಲ್ಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
www.anekal.tpa.gov.in, www.e-vinyasa.kar.nic.in



26) ಕಟ್ಟಡ ಪ್ರಾರಂಭಿಸುವ ಮುನ್ನ Structural Design ಬಗ್ಗೆ ನೊಂದಾಯಿತ Structural constultants ರವರಿಂದ Design ಪಡೆಯತಕ್ಕದ್ದು.

27) ಅನುಮೋದಿತ ನಕ್ಷೆಯ ವಿವರಗಳು ಈ ಕೆಳಕಂಡಂತಿದೆ;

| ನಡುಜಾಗಗಳು | ವಲಯ ನಿಯಮಾವಳಿಯಂತೆ | ನಕ್ಷೆಯಂತೆ |
|---|---|---|
| ಮುಂಭಾಗ<br>ಹಿಂಭಾಗ<br>ಎಡಭಾಗ<br>ಬಲಭಾಗ | ಸುತ್ತಲೂ 13.00ಮೀ. | ಸುತ್ತಲೂ 13.00ಮೀ. |
| ನೆಲ ವಿಸ್ತೀರ್ಣ ಪ್ರಮಾಣ (FAR) | 2.25 | 2.249 |
| ಕಟ್ಟಡದ ಅಂತಸ್ತುಗಳು | – | ಟವರ್-ಎ ರಲ್ಲಿ 2-ಬೇಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು, ಟವರ್-ಬಿ ರ ಬ್ಲಾಕ್-ಎ, ಬಿ ರಲ್ಲಿ 2-ಬೇಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು, ಟವರ್-ಬಿ ರ ಬ್ಲಾಕ್-ಸಿ ರಲ್ಲಿ ಬೇಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು, ಟವರ್-ಸಿರ ಬ್ಲಾಕ್-ಎ, ಬಿ ರಲ್ಲಿ ಬೇಸ್‌ಮೆಂಟ್ + ನೆಲ ಮತ್ತು ಮೇಲಿನ ಹದಿನಾಲ್ಕು ಅಂತಸ್ತುಗಳು ಮತ್ತು ಟವರ್-ಡಿರಲ್ಲಿ Indoor Games (662 ವಸತಿ ಘಟಕಗಳು) |
| ವಾಹನ ನಿಲುಗಡೆ | 729No's | 739No's |
| ದ್ವಿಚಕ್ರ ವಾಹನ ನಿಲುಗಡೆ | ಶೇ.25ರಷ್ಟು ವಾಹನ ನಿಲುಗಡೆ (2275.62ಚ.ಮೀ.) | 2275.62ಚ.ಮೀ. |
| ಕಟ್ಟಡದ ಎತ್ತರ | 45.00ಮೀ. | 44.85ಮೀ. |

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಸಹಿ/-
ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.



Housiey.com

<u>ಪ್ರತಿಯನ್ನು:</u>

1) ಶ್ರೀ ಶಿವಲಿಂಗಪ್ಪ, ಶ್ರೀ ರಾಮಚಂದ್ರಪ್ಪ ಮತ್ತು ಶ್ರೀಮತಿ ಗೌರಮ್ಮ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಶ್ರೀ ಬಿ.ಟಿ. ನಾಗರಾಜರೆಡ್ಡಿ, ಮ್ಯಾನೇಜಿಂಗ್ ಡೈರೆಕ್ಟರ್, ಮೆ॥ ಮಹೇಂದ್ರ ಹೋಮ್ಸ್ ಪ್ರೈವೇಟ್ ಲಿಮಿಟೆಡ್, ಮತ್ತು ನಂ.51, 17ನೇ ಕ್ರಾಸ್, 12ನೇ ಮೈನ್, 6ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-560 102 ಇವರಿಗೆ ಮುಂದಿನ ಕ್ರಮಕ್ಕಾಗಿ ನೀಡಲಾಗಿದೆ.
2) **ಮುಖ್ಯಾಧಿಕಾರಿಗಳು,** ಚಂದಾಪುರ ಪುರಸಭೆ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು ಇವರಿಗೆ ಕಟ್ಟಡ ನಕ್ಷೆಯ ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) **ಮಾನ್ಯ ಕಾರ್ಯದರ್ಶಿಗಳು,** ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕಾರ್ಪೋರೇಟ್ ಆಫೀಸ್, 1/14, 2ನೇ ಫ್ಲೋರ್, ಸಿಲ್ವರ್ ಜುಬ್ಲಿ ಬ್ಲಾಕ್, ಸಿಎಸ್ಐ ಕಾಂಪೌಂಡ್, ಮಿಷನ್ ರೋಡ್, ಯುನಿಟಿ ಬಿಲ್ಡಿಂಗ್, ಸಂಪಂಗಿರಾಮನಗರ, ಬೆಂಗಳೂರು-560 027 ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಕಛೇರಿ ಪ್ರತಿ.

18/7/2021

ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
**ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,**
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

Housiey.com